## ‘ಸಾ ವಿದ್ಯಾ ಯಾ ವಿಮುಕ್ತಯೇ’–ಮುಕ್ತಿಮಾರ್ಗ ತೋರುವುದೇ ನಿಜವಾದ ವಿದ್ಯೆ

- ವಿದ್ಯೆಯ ಗುರಿ ಚಾರಿತ್ರ್ಯ ಹಾಗೂ ಜ್ಞಾನದ ಗುರಿ ಪ್ರೇಮ.
- ವಿದ್ಯೆ ಎಂದರೆ ಪುಸ್ತಕ ಜ್ಞಾನ ಮತ್ತು ಅವುಗಳನ್ನು ಅಂತರ್ಗತಗೊಳಿಸಿಕೊಳ್ಳುವುದು ಮಾತ್ರವಲ್ಲ.
- ನಿಜವಾದ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಸತ್ಯ, ಭಕ್ತಿ, ಶಿಸ್ತು, ಕರುಣೆ ಮತ್ತು ಕರ್ತವ್ಯನಿಷ್ಠೆ ಮುಂತಾದ ಉದಾತ್ತ ಗುಣಗಳನ್ನು ಬೆಳೆಸುವುದಾಗಿದೆ. ಉತ್ತಮ ಗುಣಗಳಿಲ್ಲದವನು ಹೆಚ್ಚು ಜ್ಞಾನಾರ್ಜನೆ ಮಾಡುವುದರಿಂದ ಪ್ರಯೋಜನವಿಲ್ಲ. ಕೇವಲ ಬುದ್ಧಿವಂತಿಕೆ ಇದ್ದರೆ ಸಾಲದು.
- ಆಧುನಿಕ ಶಿಕ್ಷಣ ಮಾಹಿತಿಯನ್ನು ಮಾತ್ರ ನೀಡುತ್ತದೆ. ಅದು ಬದಲಾವಣೆಗೆ ದಾರಿ ತೋರುವುದಿಲ್ಲ. ಆದರೆ ಸಂಸ್ಕೃತಿ ಬದಲಾವಣೆ ತರಬಲ್ಲದು. ಸಂಸ್ಕೃತಿ ಇಲ್ಲದ ಶಿಕ್ಷಣ ನೀರಿಲ್ಲದ ಭೂಮಿಯಂತೆ, ವಿದ್ಯುತ್ ಇಲ್ಲದ ತಂತಿಯಂತೆ, ಬೆಳಕಿಲ್ಲದ ಮನೆಯಂತೆ, ಶಿಕ್ಷಕನಿಲ್ಲದ ಶಾಲೆಯಂತೆ ಹಾಗೂ ಮೂರ್ತಿ ಇಲ್ಲದ ದೇಗುಲದಂತೆ ಆಗಿರುತ್ತದೆ.
- ‘ಎಜುಕೇಷನ್’ ಎನ್ನುವ ಶಬ್ದದ ಮೂಲಪದ ‘ಎಜುಕೇರ್’, ಹೊರಗಿನಿಂದ ಮಾಹಿತಿ ಸಂಗ್ರಹಿಸುವುದೇ ‘ಎಜುಕೇಷನ್’ ಆದರೆ ಒಳಗಿರುವುದನ್ನು ಹೊರಹೊಮ್ಮಿಸುವುದು ‘ಎಜುಕೇರ್’, ಇದು ಮಾನವನ ಹೃದಯದಲ್ಲಿ ಹುದುಗಿರುವ ಪವಿತ್ರ ಗುಣಗಳನ್ನು ಹೊರತರುತ್ತದೆ. ಅವುಗಳನ್ನು ಬದುಕಿನಲ್ಲಿ ಬಳಸಿಕೊಳ್ಳಬೇಕು.
- ಪ್ರಾಪಂಚಿಕ ಶಿಕ್ಷಣ ಮೆದುಳಿಗೆ ಸಂಬಂಧಿಸಿದ್ದು, ಅದು ವ್ಯತ್ಯಾಸ ಹೊಂದುತ್ತದೆ. ಆದರೆ ಹೃದಯದಿಂದ ಹೊರಹೊಮ್ಮುವ ಕರುಣೆ, ಸಹನೆ, ಸತ್ಯ ಮುಂತಾದ ಮಾನವೀಯ ಮೌಲ್ಯಗಳು ಅವು ಮಾರ್ಪಾಡಾಗುವುದಿಲ್ಲ. ದಯೆಯಿಂದ ತುಂಬಿರುವುದೇ ಹೃದಯ; ಅಲ್ಲಿಂದ ಹೊರ ಹೊಮ್ಮಿದ ಜ್ಞಾನವೇ ನಿಜವಾದ ಶಿಕ್ಷಣ.

**–ಶ್ರೀ ಸತ್ಯಸಾಯಿ ಬಾಬಾ**

### 1. ಪ್ರಸ್ತಾವನೆ:

ಅಳಿಕೆ ಮತ್ತು ಮುದ್ದೇನಹಳ್ಳಿಯಲ್ಲಿರುವ ಶ್ರೀ ಸತ್ಯಸಾಯಿ ಲೋಕಸೇವಾ ವಿದ್ಯಾಸಂಸ್ಥೆಗಳನ್ನು ಕ್ರಮವಾಗಿ 1963 ಮತ್ತು 1973ರಲ್ಲಿ ದಾರ್ಶನಿಕರಾಗಿದ್ದ ದಿವಂಗತ ಶ್ರೀ ಮಡಿಯಾಲ ಭಟ್ ಅವರು ಶ್ರೀ ಸತ್ಯಸಾಯಿ ಬಾಬಾರವರ ಮಾರ್ಗದರ್ಶನದಲ್ಲಿ ಆರಂಭಿಸಿದರು.

ಅಳಿಕೆ–ಮುದ್ದೇನಹಳ್ಳಿಗಳಲ್ಲಿರುವ ಶ್ರೀ ಸತ್ಯಸಾಯಿ ಲೋಕಸೇವಾ ಶಿಕ್ಷಣ ಸಂಸ್ಥೆಗಳ ಹಳೆಯ ವಿದ್ಯಾರ್ಥಿಗಳು ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ಅನುಗ್ರಹ ಮತ್ತು ಆಶೀರ್ವಾದಗಳಿಂದ ಒಟ್ಟು ಸೇರಿ, ತಾವು ಪಡೆದ ಭೌತಿಕ ಮತ್ತು ಆಧ್ಯಾತ್ಮಿಕ ಸವಲತ್ತುಗಳ ಫಲಗಳನ್ನು ತಮ್ಮ ಕಿರಿಯರೊಂದಿಗೆ ಹಂಚಿಕೊಳ್ಳಲು ಮುಂದಾಗಿ, ತಮ್ಮ ಮಾತೃಸಂಸ್ಥೆಯ ಮೌಲ್ಯಗಳ ಮತ್ತು ಆದರ್ಶಗಳ ಪಡಿಯಚ್ಚಿನಲ್ಲೇ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮಾತೃಸಂಸ್ಥೆಯ ತದ್ರೂಪಿ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಬಯಸಿದರು. ಅದಕ್ಕೋಸ್ಕರ 2011ರ ಅಕ್ಟೋಬರ್ ತಿಂಗಳಲ್ಲಿ **‘ಶ್ರೀ ಸತ್ಯಸಾಯಿ ಸರಸ್ವತಿ ಎಜ್ಯುಕೇಷನ್ ಟ್ರಸ್ಟ್’** ಎಂಬ ಶೈಕ್ಷಣಿಕ ದತ್ತಿ ಪ್ರತಿಷ್ಠಾನವನ್ನು ರಚಿಸಿಕೊಂಡಿದ್ದಾರೆ. ಇದರ ಆಶ್ರಯದಲ್ಲಿ ಬರುವ ಸಂಸ್ಥೆಗಳೂ ಸೇರಿ ನಮ್ಮ ಸಮೂಹ ಶಿಕ್ಷಣ ಸಂಸ್ಥೆಗಳ ಪರಿಚಯಿಕೆಯೇ ಈ ಕಿರುಪುಸ್ತಕ.

ಚಿಕ್ಕಬಳ್ಳಾಪುರ ಪಟ್ಟಣದಲ್ಲಿ 1981ರ ಎಪ್ರಿಲ್ 2ರಂದು ಸ್ಥಾಪಿಸಲಾದ ಪ್ರಶಾಂತಿ ಬಾಲ ಮಂದಿರ ಟ್ರಸ್ಟ್ ಇನ್ನೊಂದು ಧರ್ಮದತ್ತಿಯಾಗಿದೆ. ಅವಕಾಶ ವಂಚಿತರಿಗೆ ಆಧ್ಯಾತ್ಮಿಕ ಮತ್ತು ಬೌದ್ಧಿಕವಾದ ಅದ್ವಿತೀಯ ತಾತ್ವಿಕ ಹಿನ್ನೆಲೆಯಲ್ಲಿ

ಶ್ರೀ ಸತ್ಯಸಾಯಿ ಬಾಬಾರವರ ಸಂದೇಶದಂತೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸಲು ಈ ಟ್ರಸ್ಟ್ ಕಟಿಬದ್ಧವಾಗಿದೆ. ಯಾವುದೇ ತಾರತಮ್ಯವಿಲ್ಲದೆ ಅಧ್ಯಾತ್ಮಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತ ಪ್ರತಿ ಮಗುವಿಗೂ ಸಂಪೂರ್ಣ ಉಚಿತವಾದ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವುದೇ ಟ್ರಸ್ಟ್‌ನ ದೂರದೃಷ್ಟಿಯಾಗಿದೆ. ಗ್ರಾಮೀಣ ಭಾಗದ ಅವಕಾಶವಂಚಿತ ಮಕ್ಕಳಿಗೆ ವಿಶ್ವದರ್ಜೆಯ ಮೂಲಭೂತ ಸೌಕರ್ಯಗಳಿರುವ ಶಿಕ್ಷಣವನ್ನು ನೀಡಲು ಈ ಟ್ರಸ್ಟ್ ನಿರಂತರ ಶ್ರಮವಹಿಸುತ್ತಿದೆ.

**2. ನಮ್ಮ ಶಿಕ್ಷಣಸಂಸ್ಥೆಗಳ ವೈಶಿಷ್ಟ್ಯ:**

ಅ. **ನೈತಿಕ ಮತ್ತು ಆಧ್ಯಾತ್ಮಿಕ ತರಬೇತಿ:**

ಈ ಸಂಸ್ಥೆಗಳ ವಸತಿನಿಲಯಗಳಲ್ಲಿ ವಿಶ್ವವ್ಯಾಪಿ ಸಾಯಿ ತತ್ತ್ವಗಳಾದ ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆಗಳ ತಳಹದಿಯಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ. ಪವಿತ್ರವಾದ ವಿದ್ಯಾನಿವೇಶನಗಳಲ್ಲಿ ಅಧ್ಯಾಪಕರು ವಿದ್ಯಾರ್ಥಿನಿಲಯದಲ್ಲೇ ಅಹರ್ನಿಶಿ ವಾಸವಿದ್ದು ವಾತ್ಸಲ್ಯಮಯ ವಾತಾವರಣದಲ್ಲಿ, ನೈತಿಕ ಪಾಠಗಳ ಮೂಲಕ, ಭಜನೆ ಪ್ರಾರ್ಥನೆಗಳ ಮೂಲಕ, ಪ್ರಪಂಚದ ವಿವಿಧ ಮತಗಳ ಕಥೆ–ಕಥಾನಕಗಳ ಮೂಲಕ, ದೈವಪಿತೃತ್ವ, ಮಾನವಸೋದರತ್ವಗಳ ಆದರ್ಶಗಳಲ್ಲಿ ವಿಶ್ವಾಸ ಮೂಡಿಸುತ್ತಾರೆ. ಭೌತಿಕ ವಿದ್ಯೆಗಳೊಂದಿಗೆ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಗಳನ್ನು ನೀಡುವುದು ಈ ಸಮೂಹ ಶಿಕ್ಷಣ ಸಂಸ್ಥೆಗಳ ವೈಶಿಷ್ಟ್ಯ.

ಆ. **ಸಹಪಠ್ಯ ಚಟುವಟಿಕೆಗಳು:**

ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯ ಸಾಧನೆಗಾಗಿ ಈ ಸಂಸ್ಥೆಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ವೇದ, ಭಜನೆ, ಯೋಗಾಸನ, ಸಂಗೀತ, ನಾಟಕ, ಚಿತ್ರಕಲೆ, ಚರ್ಚೆ, ಉಪನ್ಯಾಸ, ಭಿತ್ತಿಪತ್ರಿಕೆ, ರಸಪ್ರಶ್ನೆ, ವಾದ್ಯಗೋಷ್ಠಿ, ಹಬ್ಬಹರಿದಿನಗಳ ಆಚರಣೆ ಮೊದಲಾದ ವೈವಿಧ್ಯಮಯ ಪಠ್ಯೇತರ ಚಟುವಟಿಕೆಗಳನ್ನು ಅವರ ಅಭಿರುಚಿಗನುಗುಣವಾಗಿ ಕಲಿಸಲಾಗುವುದು.

ವಿಶಾಲವಾದ ಕ್ರೀಡಾಂಗಣಗಳಲ್ಲಿ ಮಕ್ಕಳಿಗೆ ಕ್ರಿಕೆಟ್, ಫುಟ್ಬಾಲ್, ಬಾಸ್ಕೆಟ್ ಬಾಲ್, ವಾಲಿಬಾಲ್, ಬ್ಯಾಡ್ಮಿಂಟನ್, ಅಥ್ಲೆಟಿಕ್ಸ್, ಟೇಬಲ್ ಟೆನ್ನಿಸ್ ಇತ್ಯಾದಿಗಳಲ್ಲಿ ತೊಡಗಲು ವ್ಯವಸ್ಥೆ ಮಾಡಲಾಗಿದೆ. ನಮ್ಮ ವಿದ್ಯಾರ್ಥಿಗಳು ಜಿಲ್ಲಾ, ಪ್ರಾಂತೀಯ ಮತ್ತು

ವಿಭಾಗೀಯ ಮಟ್ಟದ ಸ್ಪರ್ಧೆಗಳಲ್ಲದೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲೂ ಸ್ಪರ್ಧಿಸಿದ್ದಾರೆ. ಪ್ರತಿವರ್ಷ ಜನವರಿ 15 ರಿಂದ 19ರ ವರೆಗೆ ಮುದ್ದೇನಹಳ್ಳಿಯಲ್ಲಿ ನಮ್ಮ ಎಲ್ಲಾ ಕ್ಯಾಂಪಸ್‌ಗಳ ವಿದ್ಯಾರ್ಥಿಗಳಿಗಾಗಿ ಶ್ರೀ ಸತ್ಯಸಾಯಿ ಕ್ರೀಡೆ ಮತ್ತು ಸಾಂಸ್ಕೃತಿಕ ಉತ್ಸವವನ್ನು ನಡೆಸಲಾಗುವುದು. ಇದರಲ್ಲಿ ಎಲ್ಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕವೃಂದದವರು ಭಾಗವಹಿಸುತ್ತಾರೆ.

ಇ. **ವಿದ್ಯಾರ್ಥಿಗಳಿಂದ ಶಿಕ್ಷಣಕ್ಕಾಗಿ ಯಾವುದೇ ರೀತಿಯ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ.**

ಈ. ಆಯ್ಕೆ ಪ್ರಕ್ರಿಯೆಯಲ್ಲಿ ಗ್ರಾಮಾಂತರ ಸರ್ಕಾರಿ ಶಾಲೆಗಳಲ್ಲಿ ಓದಿದ ಹಾಗೂ ಆರ್ಥಿಕವಾಗಿ ಹಿಂದುಳಿದ, ಬಡ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಈ ಪರಿಚಾಯಿಕೆಯಲ್ಲಿ ಉಲ್ಲೇಖಿತ ವಿವರಗಳು ಮತ್ತು ಪ್ರವೇಶ ಪರೀಕ್ಷೆಗಳು ವಿದ್ಯಾರ್ಥಿನಿಲಯಕ್ಕೆ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳುವ ಪ್ರಕ್ರಿಯೆಗೆ ಮಾತ್ರ ಅನ್ವಯವಾಗುತ್ತದೆ.

**3. ವಸತಿನಿಲಯದ ನಿಯಮಾವಳಿಗಳು:**

ನಮ್ಮ ವಿದ್ಯಾನಿವೇಶನಗಳಲ್ಲಿ ಶಿಸ್ತಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಲಾಗುವುದು. "ಶಿಕ್ಷಣದ ಅಂತಿಮ ಗುರಿ ಚಾರಿತ್ರ್ಯ ನಿರ್ಮಾಣ" ಎಂಬುದನ್ನು ಇಲ್ಲಿ ದಾಖಲಾಗುವ ಪ್ರತಿ ವಿದ್ಯಾರ್ಥಿಯೂ ನೆನಪಿಟ್ಟುಕೊಂಡು

ಅದಕ್ಕನುಗುಣವಾಗಿ ವರ್ತಿಸಬೇಕಾಗುವುದು.

ಅ. ಪ್ರತಿ ನಿತ್ಯ ಮುಂಜಾನೆ 5.00 ಗಂಟೆಗೆ ಎದ್ದು ಪ್ರಾರ್ಥನೆ ಮೊದಲಾದ ದೈನಿಕ ಕಾರ್ಯಗಳಲ್ಲಿ ಶ್ರದ್ಧೆಯಿಂದ ಭಾಗವಹಿಸಬೇಕು. "ಬೇಗ ಮಲಗು, ಬೇಗನೆ ಏಳು" ಎಂಬ ಸೂತ್ರದನ್ವಯ ರಾತ್ರಿ 10.00ಕ್ಕೆ ಸರಿಯಾಗಿ ಪ್ರಾರ್ಥನೆಯಾದ ತಕ್ಷಣ ಮಲಗಬೇಕು.

ಆ. ವಿದ್ಯಾರ್ಥಿಗಳು ತಮ್ಮ ವಾಸದ ಕೊಠಡಿ, ತರಗತಿಗಳು, ಶಾಲಾ ಆವರಣ ಮತ್ತು ನಿವೇಶನದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು.

ಇ. ಮೌನವೇ ಸಾಧನೆಯ ಮೊದಲ ಮೆಟ್ಟಿಲು. ವಿದ್ಯಾರ್ಥಿಗಳು ಏರುಸ್ವರದಲ್ಲಿ ಮಾತನಾಡುವುದು, ಅನಗತ್ಯ ಹರಟೆಯಲ್ಲಿ ಸಮಯ ಕಳೆಯುವುದು ಮಾಡಬಾರದು. ಪ್ರಾರ್ಥನೆ, ಅಧ್ಯಯನ, ಭೋಜನಾಲಯ, ಸಭೆ-ಸಮಾರಂಭಗಳಲ್ಲಿ ಸಂಪೂರ್ಣ ಮೌನವನ್ನು ಕಾಪಾಡಬೇಕು.

ಈ. ಹೊಂದಾಣಿಕೆ, ಸಹಬಾಳ್ವೆ, ಗೌರವಯುತ ನಡವಳಿಕೆ, ಒಪ್ಪೋರಣವಾದ ವಸ್ತ್ರವಿನ್ಯಾಸ ಮಾತ್ರ ನಿರೀಕ್ಷಿತ. ವಿಕೃತಕೇಶ, ಉದ್ದ ಉಗುರು, ಆಡಂಬರ ವಸ್ತ್ರ ಮೊದಲಾದವುಗಳಿಗೆ ನಮ್ಮ ಸಂಸ್ಥೆಗಳಲ್ಲಿ ಕಟ್ಟುನಿಟ್ಟಾದ ನಿಷೇಧವಿದೆ.

ಉ. ವಿದ್ಯಾರ್ಥಿ ಜೀವನಕ್ಕೆ ಮಾರಕವಾದ, ವಿದ್ಯಾರ್ಥಿಗಳಿಗೆ ಸಲ್ಲದ ಸಾಹಿತ್ಯ, ಪತ್ರಿಕೆ ಇತ್ಯಾದಿಗಳನ್ನು ವಿದ್ಯಾರ್ಥಿಗಳು ಹೊಂದಿರುವುದನ್ನು ನಿಷೇಧಿಸಲಾಗಿದೆ. ರೇಡಿಯೋ, ಟೇಪ್ ರೆಕಾರ್ಡ್‌ರ್, ಕ್ಯಾಮೆರಾ, ಪೆನ್ ಡ್ರೈವ್, ದುಬಾರಿ ಬೆಲೆಯ ಕೈಗಡಿಯಾರ, ಮೊಬೈಲ್, ಎಮ್‌ಪಿ-3 ಪ್ಲೇಯರ್, ಇಸ್ತ್ರಿಪೆಟ್ಟಿಗೆ ಇತ್ಯಾದಿಗಳನ್ನು ವಸತಿನಿಲಯದಲ್ಲಿರುವಾಗ ತಮ್ಮೊಂದಿಗೆ ಇಟ್ಟುಕೊಳ್ಳಲು ವಿದ್ಯಾರ್ಥಿಗಳಿಗೆ ಯಾವುದೇ ಅವಕಾಶವಿರುವುದಿಲ್ಲ.

ಊ. ಧೂಮಪಾನ, ಮದ್ಯಪಾನ, ಮಾಂಸಭಕ್ಷಣೆಯನ್ನು (ಮೊಟ್ಟೆಯೂ ಸಹ) ನಮ್ಮ ನಿವೇಶನಗಳಲ್ಲಿ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಅನಗತ್ಯ ತಿರುಗಾಟ, ಕರ್ತವ್ಯದಿಂದ ವಿಮುಖನಾಗಿರುವುದು, ಶಿಳ್ಳು ಹಾಕುವುದು, ಸಿನಿಮಾ ಹಾಡುಗಳನ್ನು ಹಾಡುವುದು ಇತ್ಯಾದಿ ದುರಭ್ಯಾಸಗಳನ್ನು ಹೊಂದಿರುವುದು ಕಂಡುಬಂದಲ್ಲಿ ವಿದ್ಯಾರ್ಥಿಯು ನಿವೇಶನದಲ್ಲಿರುವ ಅರ್ಹತೆಯನ್ನು ಕಳೆದುಕೊಳ್ಳುತ್ತಾನೆ.

ಋ. ಸಂಸ್ಥೆಯ ವಸ್ತುಗಳಿಗಾಗಲಿ, ಆಸನಗಳಿಗಾಗಲಿ ಯಾವುದೇ ರೀತಿಯ ಹಾನಿಯುಂಟುಮಾಡಿದರೆ ಅಧಿಕಾರಿಗಳು ವಿಧಿಸುವ ದಂಡ ಕಟ್ಟುವುದರ ಜೊತೆಗೆ ಶಿಸ್ತಿನ ಕ್ರಮವನ್ನೂ ಎದುರಿಸಬೇಕಾಗುವುದು.

ಎ. ವಿನಯವೇ ಉತ್ತಮ ಚಾರಿತ್ರ್ಯಕ್ಕೆ ಭದ್ರ ಬುನಾದಿ. ಆದುದರಿಂದ ಸಂಸ್ಥೆಯ ಎಲ್ಲ ಹಿರಿಯರೊಡನೆ ವಿಧೇಯನಾಗಿ ಪ್ರೇಮದಿಂದ ವ್ಯವಹರಿಸುವುದು ಅಪೇಕ್ಷಣೀಯವಾಗಿದೆ.

ಏ. ಶಿಸ್ತಿನ ಬಗ್ಗೆ ಯಾವುದೇ ರಾಜಿ ಇಲ್ಲ. ಶಿಸ್ತಿನಲ್ಲಿ ತಪ್ಪಿದವರು ವಸತಿ ನಿಲಯದಲ್ಲಿರಲು ಅನರ್ಹರಾಗುತ್ತಾರೆ.

ಐ. ವಿನಯ ವಿಧೇಯತೆಯಲ್ಲಿ ತಪ್ಪಿದರೆ, ಹಾಜರಾತಿಯಲ್ಲಿ ಗಣನೀಯ ಕೊರತೆ ಕಂಡು ಬಂದರೆ, ಕರ್ತವ್ಯಲೋಪವಾದರೆ, ಅಸಭ್ಯವರ್ತನೆ ಹೊಂದಿದ್ದರೆ, ವಸತಿನಿಲಯದಲ್ಲಿ ವಾಸ ಮುಂದುವರಿಸಲು ಅವಕಾಶವಿರುವುದಿಲ್ಲ. ಈ ಬಗ್ಗೆ ಆಡಳಿತ ವರ್ಗದ ನಿರ್ಧಾರವೇ ಅಂತಿಮವಾಗಿರುತ್ತದೆ.

**4. ನಮ್ಮ ನಿವೇಶನಗಳಲ್ಲಿರುವ ಸೌಕರ್ಯಗಳು:**

ಅ. ಎರಡು ಹೊತ್ತು ಶುಚಿರುಚಿಯಾದ ಸಸ್ಯಾಹಾರಿ ಭೋಜನ: ಬೆಳಗಿನ ಉಪಾಹಾರಕ್ಕಾಗಿ ಎರಡು ಬಗೆಯ ತಿಂಡಿ, ಮೊಳೆತ ಕಾಳು, ಸಾಯಂಕಾಲದ ಲಘು ಉಪಾಹಾರ ಮತ್ತು ಹಾಲು, ರಾತ್ರಿ ಊಟವಾದ ಮೇಲೆ ಒಂದು ಲೋಟ ಹಾಲು, ಹಬ್ಬಹರಿದಿನಗಳಲ್ಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ವಿಶೇಷ ಭೋಜನ, ವಾರಕ್ಕೆರಡು ಬಾರಿ ಸಿಹಿತಿಂಡಿ, ಹಣ್ಣುಗಳು-ಇವು ವಿದ್ಯಾರ್ಥಿಗಳ ಆರೋಗ್ಯಯುತ ಬೆಳವಣಿಗೆಗಾಗಿ ವಸತಿನಿಲಯದಿಂದ ಒದಗಿಸಲಾಗುವ ಆಹಾರ ಪದ್ಧತಿಯ ವೈವಿಧ್ಯವಾಗಿದೆ.

ಆ. ವಿದ್ಯಾರ್ಥಿಗಳ ದೈನಂದಿನ ಅಗತ್ಯ ಅವಶ್ಯಕತೆಗಳನ್ನು ಪೂರೈಸಲು ನಿವೇಶನದಲ್ಲೇ ಮಳಿಗೆಗಳಿವೆ.

ಇ. ವಿದ್ಯಾರ್ಥಿಗಳ ಅಧ್ಯಯನದಲ್ಲಿ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡಲು ಅಧ್ಯಾಪಕರು ಇರುತ್ತಾರೆ. ಪ್ರತ್ಯೇಕ ಟ್ಯೂಷನ್‌ಗೆ ವ್ಯವಸ್ಥೆ ಇರುವುದಿಲ್ಲ.

ಈ. ಅಗಸರು, ಕ್ಷೌರಿಕರು, ಅಂಚೆ ವ್ಯವಸ್ಥೆ, ದರ್ಜಿಗಳ ವ್ಯವಸ್ಥೆ, ಮಕ್ಕಳಿಗಾಗಿ ದೂರವಾಣಿ ವ್ಯವಸ್ಥೆ, ವಿದ್ಯುತ್ ವೈಫಲ್ಯವಿದ್ದಾಗ ಜನರೇಟರ್ ವ್ಯವಸ್ಥೆ ಇತ್ಯಾದಿ ಸೌಕರ್ಯಗಳೂ ನಿವೇಶನದಲ್ಲೇ ಇವೆ.

ಉ. ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ಒಳಗಾದರೆ ನುರಿತ ವೈದ್ಯರಿಂದ ಚಿಕಿತ್ಸೆ ಕೊಡಿಸಲಾಗುವುದು. ಹೆಚ್ಚಿನ ಕಾಳಜಿ / ವೈಯಕ್ತಿಕ ಗಮನ ನೀಡಬೇಕಾದ ಅಗತ್ಯತೆ ಕಂಡು ಬಂದರೆ ಹೆತ್ತವರ/ ಪೋಷಕರ ಗಮನಕ್ಕೆ ತಂದು ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ. ಮುದ್ದೇನಹಳ್ಳಿ ಮತ್ತು ಮಂಡ್ಯ ನಿವೇಶನ ಹೊರತು ಮಿಕ್ಕ ವಿದ್ಯಾನಿವೇಶನಗಳಲ್ಲಿ ನಿಲಯದ ವೈದ್ಯರುಗಳಿಲ್ಲ.

**ವಿಶೇಷ ಸೂಚನೆ:** ವಿದ್ಯಾರ್ಥಿ(ನಿ)ಗೆ ಈ ಮೊದಲೇ ತೀವ್ರತರ ಕಾಯಿಲೆಗೆ ಚಿಕಿತ್ಸೆ ನಡೆದಿದ್ದರೆ ಮತ್ತು ಯಾವುದಾದರೂ ಅಪಸ್ಮಾರ ಮುಂತಾದ ಕಾಯಿಲೆಯಿದ್ದರೆ ವೈಯಕ್ತಿಕ ಸಂದರ್ಶನದ ವೇಳೆ ನಿಲಯಪಾಲಕರ ಗಮನಕ್ಕೆ ತರಬೇಕು.

ಊ. ಕಂಪ್ಯೂಟರ್, ಸಂಗೀತ, ನಾಟ್ಯ, ಕರಾಟೆ, ಸಂಗೀತ ವಾದ್ಯಗಳ ತರಬೇತಿ, ಬ್ಯಾಂಡ್ ವಾದನ ತರಬೇತಿ, ಇತ್ಯಾದಿಗಳನ್ನು ವಿದ್ಯಾರ್ಥಿಗಳು ತಮ್ಮ ಅಭಿರುಚಿಗನುಗುಣವಾಗಿ ಆಯ್ಕೆಮಾಡಿಕೊಳ್ಳಬಹುದು.

ಋ. ಅಧ್ಯಯನ, ಶಿಸ್ತು, ಸಂಯಮಪಾಲನೆ, ವಿದ್ಯಾರ್ಥಿಗಳ ಮೇಲ್ವಿಚಾರಣೆಗಾಗಿ, ನಿಲಯದಲ್ಲೇ ವಾಸವಿರುವ ಅಧ್ಯಾಪಕರೂ, ಸಹಾಯಕ ಸಿಬ್ಬಂದಿ ಇರುತ್ತಾರೆ. ಅವರು ವಿದ್ಯಾರ್ಥಿಗಳ ಎಲ್ಲ ಅವಶ್ಯಕತೆಗಳಿಗೂ ಸ್ಪಂದಿಸಿ ಅವರ ಏಳಿಗೆಗಾಗಿ ಅಹರ್ನಿಶಿ ಶ್ರಮಿಸುತ್ತಾರೆ. ಗುರುಕುಲ ಮಾದರಿಯಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿರುವುದು ನಿಸ್ವಾರ್ಥವಾಗಿ ಸಮಾಜಸೇವೆ ಮಾಡುವ ತ್ಯಾಗಜೀವಿಗಳ ಸಂಸ್ಥೆಯಾಗಿದೆ.

ಎ. ಸ್ನಾನಕ್ಕಾಗಿ ಬಿಸಿನೀರು, ಕುಡಿಯಲು ಶುದ್ಧೀಕರಿಸಿದ ನೀರು ಒದಗಿಸುವ ವ್ಯವಸ್ಥೆಯಿರುತ್ತದೆ.

**5. ಸಮವಸ್ತ್ರ**

ವಾರದ ಎಲ್ಲ ಶಾಲಾದಿನಗಳಲ್ಲೂ ಬಾಲಕರು ಬಿಳಿಯ ಪೂರ್ಣತೋಳಿನ ಅಂಗಿ ಮತ್ತು ಪ್ಯಾಂಟ್ ಧರಿಸಬೇಕಾಗುವುದು. ಆದುದರಿಂದ ಕನಿಷ್ಠ ಐದು ಜೊತೆ ಬಿಳಿಯ ಸಮವಸ್ತ್ರಗಳನ್ನು ಹೊಂದಿರಬೇಕು.

ಆಟೋಟಗಳಿಗಾಗಿ ಒಂದು ಜೊತೆ ಟ್ರ್ಯಾಕ್ ಸೂಟು, ಎರಡು ಜೊತೆ ಬಿಳಿಯ ಜುಬ್ಬ-ಪೈಜಾಮ ಮತ್ತು ಒಂದು ಜೊತೆ ಆಟಕ್ಕಾಗಿರುವ ಶೂ (ಮಿತವಾದ ಸಂಖ್ಯೆಯಲ್ಲಿ ಇತರ ಸಭ್ಯರೀತಿಯ ವಸ್ತ್ರಗಳನ್ನು) ಹೊಂದಿರಬೇಕು.

ಬಾಲಕಿಯರು ಎರಡು ಜೊತೆ ದುಪ್ಪಟ್ಟ (ಪಲ್ಲು) ಸಹಿತ ಪಿಂಕ್ ಚೂಡಿದಾರ, ಎರಡು ಜೊತೆ ದುಪ್ಪಟ್ಟ (ಪಲ್ಲು) ಸಹಿತ ಬಿಳಿ ಚೂಡಿದಾರ್, ಒಂದು ಜೊತೆ ಟ್ರ್ಯಾಕ್ ಪ್ಯಾಂಟ್ ಮತ್ತು ಒಂದು ಜೊತೆ ಆಟೋಟಗಳಿಗಾಗಿರುವ ಶೂ (ಮಿತವಾದ ಸಂಖ್ಯೆಯಲ್ಲಿ ಇತರ ಸಭ್ಯರೀತಿಯ ವಸ್ತ್ರಗಳನ್ನು) ಹೊಂದಿರಬೇಕು.

**6. ದಿನಚರಿ:**

ಏಳುವುದು- ಮುಂಜಾನೆ 5.00

ಪ್ರಾರ್ಥನೆ- ಮುಂಜಾನೆ 5.20

ಯೋಗ ಮತ್ತು ವ್ಯಾಯಾಮ- ಮುಂಜಾನೆ 5.40

ಅಧ್ಯಯನ/ ಆಟ/ ಸ್ವಚ್ಛತೆ/ ಸ್ನಾನ(ತಂಡಗಳಲ್ಲಿ)– ಬೆಳಗ್ಗೆ 6:15

ಬೆಳಗಿನ ಉಪಾಹಾರ– ಬೆಳಗ್ಗೆ 7:45

ಶಾಲಾ ಪ್ರಾರ್ಥನೆ– ಬೆಳಗ್ಗೆ 9.00

ತರಗತಿಗಳು– ಬೆಳಗ್ಗೆ 9.30

ಮಧ್ಯಾಹ್ನದ ಊಟ ಮತ್ತು ವಿರಾಮ– ಮಧ್ಯಾಹ್ನ 12.45

ತರಗತಿಗಳು– ಮಧ್ಯಾಹ್ನ 1.45

ಸಂಜೆಯ ಲಘು ಉಪಾಹಾರ– ಸಂಜೆ 4.00

ಆಟೋಟಗಳು– ಸಂಜೆ 4.15

ಸಂಗೀತ, ಲಲಿತಕಲೆಗಳು*– ಸಂಜೆ 5.00

ಸಾಯಂಕಾಲದ ಪ್ರಾರ್ಥನೆ– ಸಂಜೆ 5.40

ಅಧ್ಯಯನ– ಸಂಜೆ 6.45

ರಾತ್ರಿಯ ಭೋಜನ– ರಾತ್ರಿ 7.45

ಅಧ್ಯಯನ ಮುಂದುವರಿಕೆ– ರಾತ್ರಿ 8.15

ರಾತ್ರಿ ಪ್ರಾರ್ಥನೆಯೊಂದಿಗೆ ವಿರಾಮ– ರಾತ್ರಿ 10.00 ರಿಂದ

**7. ಹೆತ್ತವರ/ಪೋಷಕರ ಗಮನಕ್ಕೆ:**

- ಹಲವು ಮಧ್ಯವರ್ತಿ ವ್ಯಕ್ತಿಗಳು ತಾವು ವಿದ್ಯಾರ್ಥಿನಿಲಯದ ಅಧಿಕಾರಿಗಳಿಗೆ ನಿಕಟವರ್ತಿಗಳೆಂದು ಹೇಳಿಕೊಂಡು ಬಾಲಕರ/ಬಾಲಕಿಯರ ಹಿರಿಯರಿಗೆ ಪ್ರವೇಶಾವಕಾಶ ಕೊಡಿಸುವುದಾಗಿ ನಂಬಿಸಿ ವಂಚಿಸಿದ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ. ನೀವು ಇಂತಹ ಸುಳ್ಳು ಭರವಸೆಗಳನ್ನು ನಂಬಿ ಮೋಸಹೋಗಬೇಡಿ.

- ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಯ ಮುಂದಿನ ವರ್ಷದ ಪ್ರವೇಶವನ್ನು ಅವನ/ ಅವಳ ವರ್ತನೆ, ನಡತೆ ಇತ್ಯಾದಿಗಳ ಆಧಾರದಲ್ಲಿ ಪ್ರತಿವರ್ಷ ನಿಲಯದ ಅಧಿಕಾರಿಗಳು ನಿರ್ಧರಿಸುವರು.

- ನಿಲಯಾಧಿಕಾರಿಗಳ ಅನುಮತಿಯಿಲ್ಲದೆ ನಿಮ್ಮ ಬಾಲಕ/ಕಿ ವಸತಿ ನಿಲಯದಿಂದ ತಪ್ಪಿಸಿ ಹೊರಟುಹೋದರೆ ನಿಲಯಾಧಿಕಾರಿಗಳು ಹೊಣೆಗಾರರಲ್ಲ. ಅಂತಹ ವಿದ್ಯಾರ್ಥಿಯನ್ನು ಮತ್ತೆ ನಿಲಯದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ.

- ವಸತಿನಿಲಯದ ಅಧಿಕಾರಿಗಳೊಡನೆ, ಅಧ್ಯಾಪಕರೊಡನೆ, ಸಿಬ್ಬಂದಿಗಳೊಡನೆ ವಿದ್ಯಾರ್ಥಿಯು ವಿಧೇಯತೆಯಿಂದ ಆತ್ಮೀಯವಾಗಿ ವರ್ತಿಸುವಂತೆ ಪ್ರೇರೇಪಿಸುವುದು ಹೆತ್ತವರ/ ಪೋಷಕರ ಕರ್ತವ್ಯ. ವಿದ್ಯಾರ್ಥಿಗಳ ಸಮ್ಮುಖದಲ್ಲಿ ಸಂಸ್ಥೆಯ ಅಥವಾ ಕಾರ್ಯಕರ್ತರ ಬಗ್ಗೆ ಟೀಕೆ–ಟಿಪ್ಪಣಿಗಳಲ್ಲಿ ತೊಡಗದಂತೆ ಎಚ್ಚರಿಕೆ ವಹಿಸಬೇಕು. ಅದರಿಂದ ವಿದ್ಯಾರ್ಥಿ/ನಿಯ ಕಲಿಯಬಹುದಾದ ಸದ್ವಿಚಾರಗಳ ಮೇಲೂ ದುಷ್ಪರಿಣಾಮ ಉಂಟಾಗಬಹುದು.

○ ವಸತಿನಿಲಯದಲ್ಲಿ ವಿದ್ಯಾರ್ಥಿ/ನಿಯನ್ನು ಸೇರಿಸಿದ ಮೇಲೆ ಅವರು ಹೊಸ ಪರಿಸರಕ್ಕೆ ಹೊಂದಿಕೊಳ್ಳಲು ಅನುಕೂಲವಾಗಲು ಹೆತ್ತವರು ಜುಲೈ 15ರವರೆಗೂ ಬರಬಾರದಾಗಿ ವಿನಂತಿ.

○ ವಿದ್ಯಾರ್ಥಿನಿಲಯವು ನಿಲಯವಾಸಿಗಳಿಗಾಗಿ ಮಾತ್ರ. ಹೆತ್ತವರು/ಪೋಷಕರು ವಿದ್ಯಾರ್ಥಿಗಳ ವಾಸದ ಕೊಠಡಿಗೆ ಹೋಗುವುದನ್ನು ನಿಷೇಧಿಸಲಾಗಿದೆ. ನಿಗದಿತ ವೇಳೆ ಮತ್ತು ಸ್ಥಳದಲ್ಲಿ ಮಗ/ಮಗಳನ್ನು ಭೇಟಿಮಾಡಬಹುದು.

○ ಹೆತ್ತವರು/ಪೋಷಕರು ನಿವೇಶನದೊಳಕ್ಕೆ ಮಾಂಸಭಕ್ಷ್ಯಗಳನ್ನು (ಮೊಟ್ಟೆಯನ್ನು ಸಹ), ಪಾನೀಯವನ್ನು ತರುವುದನ್ನು ನಿಷೇಧಿಸಲಾಗಿದೆ. ಹಣ್ಣು, ಬಿಸ್ಕತ್ತುಗಳನ್ನು ತರಬಹುದು. ಭೇಟಿಗಾಗಿ ಬಂದಾಗ ನಿವೇಶನದಿಂದ ಹೊರಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವಂತಿಲ್ಲ.

○ ವಿದ್ಯಾರ್ಥಿಗಳು ಮಧ್ಯ ವಾರ್ಷಿಕ ರಜೆ ಮತ್ತು ಬೇಸಿಗೆ ರಜೆಗಳಲ್ಲಿ ಮಾತ್ರ ಮನೆಗೆ ಹೋಗಲು ಅನುಮತಿ ಇರುತ್ತದೆ.

ವಿಶೇಷ ಸೂಚನೆ: ವಿದ್ಯಾರ್ಥಿಗಳನ್ನು ತಮ್ಮ ಮನೆಗೆ ಕರೆದುಕೊಳ್ಳಲು ಹೆತ್ತವರಲ್ಲದೆ ಬೇರೆ ಸಂಬಂಧಿಕರು, ಸ್ನೇಹಿತರು, ಬರುವುದಾದಲ್ಲಿ ಹೆತ್ತವರು/ ಪೋಷಕರು ಅಧಿಕೃತವಾಗಿ ಪತ್ರಬರೆದು ಸಂಬಂಧಪಟ್ಟ ನಿಲಯಪಾಲಕರಿಂದ ಪೂರ್ವಾನುಮತಿ ಪಡೆದಿರಬೇಕು.

**8. ವಸತಿ ನೀಡಲಾಗುವ ತರಗತಿಗಳ ವಿವರ:**

| | | | |
|---|---|---|---|
| ವಿದ್ಯಾರ್ಥಿ | 6ನೇ ತರಗತಿ | ರಾಜ್ಯ ಶಿಕ್ಷಣ– ಆಂಗ್ಲ ಮತ್ತು ಕನ್ನಡ ಮಾಧ್ಯಮ | ಚಿಕ್ಕಬಳ್ಳಾಪುರ, ಕಲಬುರ್ಗಿ, ವಿಜಯಪುರ, ಮಂಡ್ಯ, ಕಾರವಾರ, ತುಮಕೂರು, ಬಳ್ಳಾರಿ, ಕೊಪ್ಪಳ, ಬೆಳಗಾವಿ, ಮೈಸೂರು, ಶಿವಮೊಗ್ಗ, ಉಡುಪಿ, ಹಾಸನ. |
| ವಿದ್ಯಾರ್ಥಿ | 6ನೇ ತರಗತಿ | ಸಿಬಿಎಸ್‌ಸಿ– ಆಂಗ್ಲ ಮಾಧ್ಯಮ | ಚಿಕ್ಕಮಗಳೂರು, ಚಿಕ್ಕಬಳ್ಳಾಪುರ |
| ವಿದ್ಯಾರ್ಥಿನಿಯರ | 6ನೇ ತರಗತಿ | ರಾಜ್ಯ ಶಿಕ್ಷಣ– ಆಂಗ್ಲ ಮತ್ತು ಕನ್ನಡ ಮಾಧ್ಯಮ | ಚಿಕ್ಕಬಳ್ಳಾಪುರ, ಗದಗ, ಹಾವೇರಿ*, ಕೋಲಾರ*, ಕೊಡಗು*, ದೊಡ್ಡಬಳ್ಳಾಪುರ*, |
| ವಿದ್ಯಾರ್ಥಿನಿಯರ | 6ನೇ ತರಗತಿ | ಸಿಬಿಎಸ್‌ಸಿ– ಆಂಗ್ಲ ಮಾಧ್ಯಮ | ಚಿಕ್ಕಮಗಳೂರು |

*ಸರಕಾರದ ಅನುಮತಿಯ ಮೇಲೆ ನಿರ್ಧಾರವು ಅವಲಂಬಿತವಾಗಿರುತ್ತದೆ.

ಕ. ಪ್ರವೇಶ ಪರೀಕ್ಷೆ ಮತ್ತು ಸಂದರ್ಶನಕ್ಕೆ ಬರುವಾಗ ವರ್ಗಾವಣೆ ಪತ್ರತರಬೇಕಾದ ಅಗತ್ಯವಿಲ್ಲ.

ಕಾ. ಪ್ರವೇಶ ಪರೀಕ್ಷೆಗಾಗಿ ಹಾಗೂ ಸಂದರ್ಶನಕ್ಕೆ ಬರುವ ಹೆತ್ತವರು/ಪೋಷಕರು ವಸತಿಗಾಗಿ ತಮ್ಮದೇ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ನಾವು ಯಾವುದೇ ವ್ಯವಸ್ಥೆಯನ್ನು ಮಾಡುವುದಿಲ್ಲ.

ಕಿ. ಈಗಾಗಲೇ 6ನೇ ತರಗತಿಯಲ್ಲಿ ಓದುತ್ತಿರುವವರು/ ಓದಿದವರು ಮತ್ತೆ ಅದೇ ತರಗತಿಗೆ ಸೇರಲು ಅವಕಾಶವಿರುವುದಿಲ್ಲ.

ಕೀ. ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೌಲ್ಯಮಾಪನವೇ ನಮ್ಮ ಆಯ್ಕೆಯ ಮಾನದಂಡ. ಪಠ್ಯೇತರ ಪ್ರತಿಭೆಗೂ ವಿಶೇಷ ಪರಿಗಣನೆಯಿದೆ. ದೇಣಿಗೆ ಅಥವಾ ಶಿಫಾರಸ್ಸಿನಿಂದ ಇಲ್ಲಿ ಪ್ರವೇಶ ಸಾಧ್ಯವಿಲ್ಲ.

ಕು. 5ನೇ ತರಗತಿಯ ಫಲಿತಾಂಶ ಪ್ರಕಟವಾಗದಿದ್ದರೂ ಪ್ರವೇಶಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತದೆ.

ಕೂ. ಮಾಹಿತಿ ಪುಸ್ತಕವನ್ನು ಸ್ವತಃ ಬಂದು ಪಡೆದುಕೊಂಡರೆ ಪ್ರತಿ ಒಂದಕ್ಕೆ 100/– ಮಾತ್ರ. ಮಾಹಿತಿ ಪುಸ್ತಕವನ್ನು ಪೋಸ್ಟ್ ಮೂಲಕ ಪಡೆದುಕೊಳ್ಳಲು 170/–ನ್ನು ಕೆಳಕಂಡ ವಿಳಾಸಕ್ಕೆ ಎಂ ಓ ಮಾಡಿ ಪಡೆದುಕೊಳ್ಳುವುದು. (ವಿದ್ಯಾರ್ಥಿಯ ವಸತಿ ನಿವೇಶನಕ್ಕೆ ಪ್ರವೇಶ ಪಡೆದುಕೊಳ್ಳಲು ಇಚ್ಛಿಸುವ ತರಗತಿ, ಮಾಧ್ಯಮ ಹಾಗೂ ರಾಜ್ಯ/ ಸಿ ಬಿ ಎಸ್ ಸಿ ಪಠ್ಯಕ್ರಮವನ್ನು ಬರೆದು ಕಳುಹಿಸತಕ್ಕದ್ದು)

*ನಿಗದಿತ ದಿನಗಳಲ್ಲಿ

**ಅಡ್ಮಿಶನ್ ಮ್ಯಾನೇಜ್ಮೆಂಟ್ ಸೆಂಟರ್**

**ಶ್ರೀ ಸತ್ಯಸಾಯಿ ಹಾಸ್ಟೆಲ್,**

**ಸತ್ಯಸಾಯಿ ಗ್ರಾಮ,**

**ಅಂಚೆ: ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, 562101, ಕರ್ನಾಟಕ**

**ದೂರವಾಣಿ: 94993 60933, 93800 66253, 90192 83854, 08154– 240700**

ಕೃ. ಮಾಹಿತಿ ಪುಸ್ತಕವನ್ನು ಮುದ್ದೇನಹಳ್ಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಕಛೇರಿಯಲ್ಲಿ ಮತ್ತು ನಮ್ಮ ಎಲ್ಲಾ ವಿದ್ಯಾರ್ಥಿ ನಿಲಯಗಳ ಕಛೇರಿಗಳಲ್ಲಿ ಮತ್ತು ಆನ್‌ಲೈನ್ ವೆಬ್‌ಸೈಟ್ (www.pbmt.org, www.sssset.org ಮತ್ತು www.ssslst.org) ನಲ್ಲಿ ದಿನಾಂಕ 15.03.2020 ರವರೆಗೆ ದೊರೆಯುವುದು.

ಕೆ. **15 ಮಾರ್ಚ್ 2020,** ಭರ್ತಿ ಮಾಡಲಾದ ಪ್ರವೇಶ ಪತ್ರ (ಅಪ್ಲಿಕೇಶನ್)ವನ್ನು ನಮ್ಮ ಕಛೇರಿಗೆ ತಲುಪಿಸಲು ಕೊನೆಯ ದಿನಾಂಕವಾಗಿರುತ್ತದೆ.

ಕೇ. ಪ್ರವೇಶ ಬೇಡಿಕೆ ಪತ್ರ (ಅಪ್ಲಿಕೇಶನ್)ದ ಜೊತೆಗೆ ಪ್ರಸ್ತುತ ಓದುತ್ತಿರುವ ತರಗತಿಯ ಮಧ್ಯವಾರ್ಷಿಕ ಪರೀಕ್ಷೆಯ ಹಾಗೂ ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯ ಅಂಕಪಟ್ಟಿಗಳನ್ನು ಶಾಲಾ ಮುಖ್ಯಸ್ಥರ ಮೇಲು ಸಹಿಯೊಂದಿಗೆ ಲಗತ್ತಿಸಬೇಕು.

ಕೈ. ಅಂಚೆ ಮೂಲಕ ಅಥವಾ ವೈಯಕ್ತಿಕವಾಗಿ ಬಂದು ಅಭ್ಯರ್ಥನ ಪತ್ರ (ಅಪ್ಲಿಕೇಶನ್) ಪಡೆದುಕೊಂಡಿದ್ದರೆ ರೂ.100/–ರ ಡಿ.ಡಿ. ಯನ್ನು ಪುನಃ ಭರ್ತಿ ಮಾಡಿದ ಅರ್ಜಿ ಜೊತೆಗೆ ಕಳುಹಿಸಬೇಕಾಗಿಲ್ಲ.

ಕೊ. ಲಿಖಿತ ಪ್ರವೇಶ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನದ ಆಧಾರದ ಮೂಲಕ ಪ್ರವೇಶ ಪ್ರಕ್ರಿಯೆಯನ್ನು ನಡೆಸಲಾಗುವುದು.

ಕೋ. ಪ್ರವೇಶ ಪರೀಕ್ಷೆಗಳನ್ನು ಚಿಕ್ಕಬಳ್ಳಾಪುರ, ಬೆಂಗಳೂರು, ಹುಬ್ಬಳ್ಳಿ, ಕಲಬುರ್ಗಿ, ಜಯಪುರ, ಮಂಡ್ಯ, ಬೇಲೂರು, ಇಂಡಿ, ಯಲಬುರ್ಗಿ ಮತ್ತು ಸಿರಾ ಕೇಂದ್ರಗಳಲ್ಲಿ ಅರ್ಜಿಯಲ್ಲಿ ಸೂಚಿಸಿದ ವಿವರದಂತೆ ಏಕಕಾಲದಲ್ಲಿ ನಡೆಸಲಾಗುವುದು.

ಕೌ. ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಮೌಖಿಕ ಪರೀಕ್ಷೆಗಾಗಿ (ಸಂದರ್ಶನಕ್ಕಾಗಿ) ಸ್ಥಳ, ದಿನಾಂಕ, ಸಮಯವನ್ನು ಮುಂದೆ ತಿಳಿಸಲಾಗುವುದು. ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳೆರಡಕ್ಕೂ ಸಮಾನ ಆದ್ಯತೆ ನೀಡಿ ಆಯ್ಕೆಯನ್ನು ಮಾಡಲಾಗುವುದು. ಮೌಖಿಕ ಪರೀಕ್ಷೆಗೆ ಬರುವಾಗ ವಿದ್ಯಾರ್ಥಿಗಳು ನೋಂದಾಯಿತ ವೈದ್ಯರಿಂದ ಆರೋಗ್ಯ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ತರಬೇಕು.

ಕಂ. ಅಗತ್ಯ ವಿವರಣೆಗಳಿಗಾಗಿ ಆಯಾ ಕ್ಯಾಂಪಸ್ಸಿನ ದೂರವಾಣಿ ಸಂಖ್ಯೆ ಮೂಲಕ ಬೆಳಗ್ಗೆ 9.00 ಸಂಜೆ 5.00 ಗಂಟೆಯವರೆಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಕಃ. 6ನೇ ತರಗತಿಗೆ ಪ್ರವೇಶ ಪರೀಕ್ಷೆಯನ್ನು **12ನೇ ಏಪ್ರಿಲ್ 2020ರಂದು** ನಡೆಸಲಾಗುವುದು.

ಖ. ಪ್ರವೇಶ ಪರೀಕ್ಷೆಗೆ ಪಠ್ಯಕ್ರಮವನ್ನು ಅರ್ಜಿಯ ಜೊತೆಗೆ ಲಗತ್ತಿಸಿದೆ.

ಖಾ. ಅರ್ಹ ಅಭ್ಯರ್ಥಿಗಳಿಗೆ ಹಾಸ್ಟೆಲ್ ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಮಾಡಲಾಗಿದೆ.

ಖಿ. ಅರ್ಜಿಯ ಜೊತೆಗೆ ಲಗತ್ತಿಸಿರುವ ಪ್ರವೇಶಪತ್ರದೊಂದಿಗೆ ಹಾಗೂ ಭಾವಚಿತ್ರವಿರುವ ಗುರುತಿನ ಚೀಟಿಯನ್ನು (ಆಧಾರ ಕಾರ್ಡ್)ಆಯ್ಕೆ ಮಾಡಿಕೊಂಡ ಪರೀಕ್ಷಾ ಕೇಂದ್ರದಲ್ಲಿ ಸೂಚಿಸಿದ ದಿನಾಂಕದಂದು ಪರೀಕ್ಷೆಗೆ ಹಾಜರಾಗತಕ್ಕದ್ದು.

**9. ಹಾಸ್ಟಲ್ ಪ್ರವೇಶ ಪರೀಕ್ಷೆಯ ವೇಳಾಪಟ್ಟಿ:**

**12ನೇ ಏಪ್ರಿಲ್ 2020, ಭಾನುವಾರ**

ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ 6ನೇ ತರಗತಿ, ರಾಜ್ಯ ಪಠ್ಯಕ್ರಮ (ಕನ್ನಡ ಮತ್ತು ಆಂಗ್ಲ ಮಾಧ್ಯಮ)

ಮಧ್ಯಾಹ್ನ 2.00 ರಿಂದ ಸಂಜೆ 5.00 ರ ವರೆಗೆ 6ನೇ ತರಗತಿ-ಸಿಬಿಎಸ್‌ಸಿ

**10. ವಸತಿ ನಿಲಯದ ಶುಲ್ಕದ ವಿವರ:**

ವಸತಿ ನಿಲಯದ ಖರ್ಚು ರೂ. 28,000/- ಮುಂಗಡ ಹಣ ರೂ. 1,000/-, ವೈಯಕ್ತಿಕ ಖರ್ಚು ರೂ. 8,000/- (ಧೋಬಿ, ಪುಸ್ತಕ ಹಾಗೂ ಔಷಧಿ ಖರ್ಚುಗಳು ಇತ್ಯಾದಿ.) ಈ ಶುಲ್ಕವನ್ನು ವರ್ಷದಲ್ಲಿ ಎರಡು ಬಾರಿ ಲೆಕ್ಕಹಾಕಲಾಗುವುದು. ಏನಾದರೂ ಹಣದ ಕೊರತೆ ಕಂಡುಬಂದಲ್ಲಿ ಅದನ್ನು ಪೋಷಕರೇ ಭರಿಸತಕ್ಕದ್ದು. ಒಮ್ಮೆ ಪಾವತಿಸಿದ ವಸತಿ ನಿಲಯದ ಶುಲ್ಕ (ರೂ. 28,000)ವನ್ನು ನಂತರ ಯಾವ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ವಿದ್ಯಾರ್ಥಿಗಳನ್ನು ವಸತಿ ನಿಲಯದಿಂದ ಮಧ್ಯದಲ್ಲಿ ಬಿಡಿಸಿಕೊಂಡು ಹೋದಲ್ಲಿ ಕೇವಲ ಮುಂಜಾಗ್ರತಾ ಠೇವಣಿ ಹಾಗೂ ವೈಯಕ್ತಿಕ ಖರ್ಚಿಗಾಗಿ ಮೀಸಲಿಟ್ಟ ಹಣದಲ್ಲಿ ಉಳಿದಿರುವ ಹಣವನ್ನು ಮಾತ್ರ ಹಿಂದಿರುಗಿಸಲಾಗುತ್ತದೆ.

**11.** ಶ್ರೀ ಮಡಿಯಾಲ ನಾರಾಯಣ ಭಟ್ ವಿದ್ಯಾರ್ಥಿ ವೇತನವನ್ನು ಆರ್ಥಿಕವಾಗಿ ಹಿಂದುಳಿದ ಕೆಲವು ಗ್ರಾಮೀಣ ವಿದ್ಯಾರ್ಥಿಗಳಿಗೆ ವಸತಿನಿಲಯದ ಆಯ್ಕೆ ಪ್ರಕ್ರಿಯೆಯು ಮುಗಿದ ನಂತರ ವಸತಿ ನಿಲಯದ ಶುಲ್ಕವೆಂದು ಪರಿಗಣಿಸಿ

ಭರಿಸಲಾಗುವುದು.

**12**. ಇನ್ನೂ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬಹುದಾದ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳು ಈ ಕೆಳಗಿನಂತಿವೆ:

**ವಿದ್ಯಾರ್ಥಿ ನಿಲಯಗಳು**

| | |
|---|---|
| ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ | ಸಾರ್ವಜನಿಕ ಸಂಪರ್ಕ ಕೇಂದ್ರ, ಶ್ರೀ ಸತ್ಯಸಾಯಿ ಹಾಸ್ಟೆಲ್, ಅಂಚೆ: ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ–562101<br>ದೂರವಾಣಿ: 94993 60933, 93800 66253, 90192 83854, 08154–240700 |
| ಕಲಬುರ್ಗಿ: ಶ್ರೀ ಸತ್ಯಸಾಯಿ ವಿದ್ಯಾನಿಕೇತನಮ್ | ನವನಿಹಾಳ, ಓಕಲಿ ಅಂಚೆ, ಕಮಲಾಪುರ, ಗುಲ್ಬರ್ಗ ಜಿಲ್ಲೆ, ಕರ್ನಾಟಕ– 585 313<br>ದೂರವಾಣಿ: 76765 75178, 9611492512, 74068 64143 |
| ವಿಜಯಪುರ: ಶ್ರೀ ಸತ್ಯಸಾಯಿ ಪ್ರೇಮನಿಕೇತನಮ್ | ಅಂಜುಟಗಿ, ಇಂಡಿ ತಾಲ್ಲೂಕು, ವಿಜಾಪುರ ಜಿಲ್ಲೆ, ಕರ್ನಾಟಕ– 586 204<br>ದೂರವಾಣಿ: 99458 37974, 63636 77734, |
| ಮಂಡ್ಯ: ಶ್ರೀ ಸತ್ಯಸಾಯಿ ಶಾರದಾನಿಕೇತನಮ್ | ಮಾರದೇವನಹಳ್ಳಿ ಗ್ರಾಮ, ಚಂದಗಾಲು ಅಂಚೆ, ದುದ್ದ ಹೋಬಳಿ<br>ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ– 571 405<br>ದೂರವಾಣಿ: 91087 93825, 81976 93176 |
| ತುಮಕೂರು: ಶ್ರೀ ಸತ್ಯಸಾಯಿ ಕಾರುಣ್ಯನಿಕೇತನಮ್ | ಗಾಣದಹುಣಸೆ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ–572 115<br>ದೂರವಾಣಿ: 63620 19894, 82176 22855 |
| ಬಳ್ಳಾರಿ: ಶ್ರೀ ಸತ್ಯಸಾಯಿ ವಿಶ್ವನಿಕೇತನಮ್ | ಇಂಗಳಗಿ, ಖಾರಿಗನೂರು, ಪಿ ಒ ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ–583223<br>ದೂರವಾಣಿ: 74066 92596, 99864 13946 |
| ಕೊಪ್ಪಳ: ಶ್ರೀ ಸತ್ಯಸಾಯಿ ಸೇವಾನಿಕೇತನಮ್ | ಕುದ್ರಿಕೂಟಗಿ, ಮಲಕ ಸಮುದ್ರ ಅಂಚೆ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ– 583 236 |

| | |
|---|---|
| | ದೂರವಾಣಿ: 73492 35747, 63665 08713 |
| ಬೆಳಗಾವಿ: ಶ್ರೀ ಸತ್ಯಸಾಯಿ ನಿತ್ಯನಿಕೇತನಮ್ | ತೆರೆಗಾಲಿ ಹಳ್ಳಿ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ, ಕರ್ನಾಟಕ–591302<br>ದೂರವಾಣಿ:70262 74153, 99028 84807. |
| ಮೈಸೂರು: ಶ್ರೀ ಸತ್ಯಸಾಯಿ ಅನಂತನಿಕೇತನಮ್ | ದೈತ್ಯನಕೆರೆ ಕಾವಲ್ ಹಳ್ಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ. ಕರ್ನಾಟಕ–571189<br>ದೂರವಾಣಿ: 88803 70999, 84310 67253 |
| ಶಿವಮೊಗ್ಗ: ಶ್ರೀ ಸತ್ಯಸಾಯಿ ಸರ್ವನಿಕೇತನಮ್ | ಕಮರೂರು, ಬೆನ್ನೂರು ಅಂಚೆ, ಚಂದ್ರಗುತ್ತಿ ಹೋಬಳಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ಕರ್ನಾಟಕ–<br>ದೂರವಾಣಿ: 84310 60673, 63639 77361, 8660 625168 |
| ಉಡುಪಿ: ಶ್ರೀ ಸತ್ಯಸಾಯಿ ಅನನ್ಯನಿಕೇತನಮ್ | ತ್ರಾಸಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ. ಕರ್ನಾಟಕ–576247<br>ದೂರವಾಣಿ: 94494 13467, 84310 77698 |
| ಹಾಸನ: ಶ್ರೀ ಸತ್ಯಸಾಯಿ ಸತ್ಯನಿಕೇತನಮ್ | ಚನ್ನೇನಹಳ್ಳಿ, ಇಬ್ಬೀಡು ಅಂಚೆ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ. ಕರ್ನಾಟಕ– 573216<br>ದೂರವಾಣಿ: 93800 69098, 84310 84963 |
| ಜಯಪುರ: ಶ್ರೀ ಸತ್ಯಸಾಯಿ ದಿವ್ಯನಿಕೇತನಮ್ | ಶೃಂಗೇರಿ ರಸ್ತೆ, ಜಯಪುರ ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಂಗಳೂರು ಕರ್ನಾಟಕ–577429<br>ದೂರವಾಣಿ: 97410 46665, 94481 57539 |
| ಕಾರವಾರ: ಶ್ರೀ ಸತ್ಯಸಾಯಿ ಸತ್ವನಿಕೇತನಮ್ | ಬೇಲೂರು ಹಳ್ಳಿ, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ. ಕರ್ನಾಟಕ– 581400 |

| | |
|---|---|
| | ದೂರವಾಣಿ: 94834 52523, 92424 53243 |

**ವಿದ್ಯಾರ್ಥಿನಿಯರ ನಿಲಯಗಳು**

| | |
|---|---|
| ಗದಗ: ಶ್ರೀ ಸತ್ಯಸಾಯಿ ವಾಣಿನಿಕೇತನಮ್ | ಮಜ್ಜೂರು, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ, ಕರ್ನಾಟಕ–582 120<br>ದೂರವಾಣಿ: 81230 34773, 94825 02866 |
| ಚಿಕ್ಕಬಳ್ಳಾಪುರ: ಶ್ರೀ ಪ್ರಶಾಂತಿ ಬಾಲಮಂದಿರ ಬಾಲಕಿಯರ ಪ್ರೌಢಶಾಲೆ | ವಪಸಂದ್ರ ಉತ್ತರ ಬಡಾವಣೆ, ಚಿಕ್ಕಬಳ್ಳಾಪುರ, ಕರ್ನಾಟಕ– 572 101<br>ದೂರವಾಣಿ: 96115 40202, 90662 00483, 87628 71743 |
| ಚಿಕ್ಕಮಗಳೂರು: ಶ್ರೀ ಸತ್ಯಸಾಯಿ ಶ್ರೀನಿಕೇತನಮ್ | ಮಳಿಗೆ, ಜಯಪುರ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ–577 123<br>ದೂರವಾಣಿ: 79965 87784, 91485 26152 |

**ಬಾಲಕಿಯರಿಗಾಗಿ ನೂತನ ವಿದ್ಯಾನಿವೇಶನಗಳು ಅಥವಾ ವಸತಿ ನಿಲಯಗಳನ್ನು ಹಾವೇರಿ, ದೊಡ್ಡಬಳ್ಳಾಪುರ, ಕೊಡಗು, ಕೋಲಾರ ಜಿಲ್ಲೆಗಳಲ್ಲಿ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಆರಂಭಿಸಲಾಗುವುದು.**

**ವಿವರಗಳಿಗೆ ಸಂಪರ್ಕಿಸಿ: 90192 83854**

**ನಿಮ್ಮ ಗಮನಕ್ಕೆ**

ಈ ಪರಿಚಾಯಿಕೆ ಕಿರುಪುಸ್ತಕದಲ್ಲಿ ನೀಡಲಾದ ವಿವರಗಳು ಹಾಗೂ ನಡೆಸಲಾಗುವ ಪ್ರವೇಶ ಪರೀಕ್ಷೆಗಳು ವಸತಿ ನಿಲಯದ ದಾಖಲಾತಿಗೆ ಸಂಬಂಧಿಸಿದೆ. ವಾರ್ಡನ್ನರು ವಸತಿ ನಿಲಯದ ಅಧಿಕಾರಿಗಳು ರೂಪಿಸಿದ ಪ್ರಚಲಿತ ನಿಯಮಗಳಿಗೆ ಅನುಸಾರವಾಗಿ ವಿದ್ಯಾರ್ಥಿಗಳನ್ನು ವಸತಿನಿಲಯಕ್ಕೆ ದಾಖಲು ಮಾಡಿಕೊಳ್ಳುತ್ತಾರೆ.